MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 14-1-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಶ್ರೀಲಂಕಾ 3 ಲಕ್ಷ ಟನ್ ಅಕ್ಕಿ ಆಮದು ಮಾಡುವತ್ತ

ಬೆಳೆಹಾನಿಯಿಂದಾಗಿ ಪೂರೈಕೆ ಇಳಿಕೆಯನ್ನು ತಡೆದು ಸುಗಮ ಪೂರೈಕೆಗಾಗಿ ಶ್ರೀಲಂಕಾ ಸರಕಾರ 2 ಲಕ್ಷ ಟನ್ ಗಳ ಪಾರಾಬಾಯಿಲ್ಡ್ ಕುಚ್ಚಲಕ್ಕಿ ಹಾಗೂ 1 ಲಕ್ಷ ಟನ್ GR11 ಅಕ್ಕಿಯನ್ನು ಆಮದು ಮಾಡಲು ಅನುಮೋದಿಸಿದೆಯೆನ್ನಲಾಗಿದೆ.

## ಡಿಸೆಂಬರ್ 2021 ರಲ್ಲಿ ಭಾರತದ ಪಾಮೆಣ್ಣೆ ಆಮದು 29 ಶೇಕಡಾ ಇಳಿಕೆ

2021 ಡಿಸೆಂಬರ್ ದಲ್ಲಿ ಭಾರತದ ಪಾಮೆಣ್ಣೆ ಆಮದು 2020 ದಶಂಬರ್ ದಲ್ಲಿದ್ದ 768,392 ಟನ್ ಗಳಿಂದ 29 ಶೇಕಡಾ ಇಳಿಕೆ ಕಂಡು 544,343 ಟನ್ ಗಳಾಗಿವೆಯೆಂದು SEA ಹೇಳಿದೆ. ದೇಶದ ಒಟ್ಟು ಸಸ್ಯಜನ್ಯ ಎಣ್ಣೆ ಆಮದು ಪ್ರಮಾಣ 10 ಶೇಕಡಾ ಇಳಿಕೆಯಾಗಿ ದಶಂಬರ 2021 ರಲ್ಲಿ 12.26 ಲಕ್ಷ ಟನ್ ಗಳಾಗಿವೆಯೆನ್ನಲಾಗಿದೆ. 2020 ದಶಂಬರ ದಲ್ಲಿ 13.56 ಲಕ್ಷ ಟನ್ ಆಮದಾಗಿತ್ತೆನ್ನಲಾಗಿದೆ. ಆದರೆ RED (ರಿಫೈಂಡ್) ಪಾಮೆಣ್ಣೆ ಆಂದು ಪ್ರಮಾಣ ಹೆಚ್ಚಳವಾಗುತ್ತಿರುವುದರಿಂದ ರಿಫೈನರಿಗಳ ಮೇಲೆ ಪರಿಣಾಮವಾಗಲಿದೆಯೆಂದು SEA (ಸಾಲ್ವೆಂಟ್ ಎಕ್ಸ್‌ಟ್ರಾಕ್ಟ್ರರ್ಸ್ ಎಸೋಸಿಯೇಶನ್) ಹೇಳಿದೆ.

## ಉತ್ಪಾದನೆ ಇಳಿಕೆಯ ಸಾಧ್ಯತೆ ಹಾಗೂ ಅಧಿಕ ಬೇಡಿಕೆಯಿಂದ ಜೀರಿಗೆ ಕೊತ್ತಂಬರಿ ದರ ಹೆಚ್ಚಳ

ಹೊಸಬೆಳೆಯಲ್ಲಿ ಉತ್ಪಾದನೆ ಇಳಿಕೆಯ ಅಂದಾಜು ಹಾಗೂ ಪೂರೈಕೆಯಲ್ಲಿ ಇಳಿಕೆ, ಬೇಡಿಕೆ ಹೆಚ್ಚಳದಿಂದ ಮಾರುಕಟ್ಟೆಯಲ್ಲಿ ಕೊತ್ತಂಬರಿ ಹಾಗೂ ಜೀರಿಗೆ ದರಗಳು ಹೆಚ್ಚಳವಾಗುತ್ತಿವೆ.